ಅ) ಈಗಿನ ಪರಿಸ್ಥಿತಿಯಲ್ಲಿ ಕಂದಾಯ ಇಲಾಖೆಯಲ್ಲಿ ಕೆಲಸಗಳು ಹೆಚ್ಚಾಗಿರುವುದರಿಂದ ಮತ್ತು ಆಡಳಿತವನ್ನು ಚುರುಕು ಗೊಳಿಸುವ ದೃಷ್ಟಿಯಿಂದ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರುಗಳ ಹುದ್ದೆಗಳನ್ನು ಹೆಚ್ಚು ಮಾಡುವ ಆಲೋಚನೆಯೇನಾದರೂ ಸರಕಾರದಲ್ಲಿದ್ದಿಯೇ ?

ಆ) ಹಾಗಿದ್ದಲ್ಲಿ ಯಾವಾಗ ಅದನ್ನು ಕಾರ್ಯಗತ ಮಾಡುವಿರಿ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಹೆಜಮಾಡಿ ಗ್ರಾಮದಲ್ಲಿ ಕೂಲಿಗಾರರಿಗೆ ಹಕ್ಕು ಪತ್ರಗಳನ್ನು ನೀಡುವುದು

೧೩೫೭. ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರದ ಹೆಜಮಾಡಿ ಗ್ರಾಮದಲ್ಲಿ ಸುಮಾರು ೧೦ ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಬಡ ಕೃಷಿ ಕೂಲಿಗಾರರು ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವರಿಗೆ ಯಾವಾಗ ಹಕ್ಕು ಪತ್ರಗಳನ್ನು ನೀಡಲಾಗುವುದು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು),—

ಅ) ಸುಮಾರು ೧೯೭೭ ರಿಂದ ಉಡುಪಿ ತಾಲ್ಲೂಕು ಹೆಜಮಾಡಿ ಗ್ರಾಮದ ಸರ್ವೆ ನಂಬರು ೨೪೩:೪ಎ:೧ಎ ಹಾಗೂ ೨೪೩:೪ಸಿ:೨ಎ ಜಮೀನಿನಲ್ಲಿ ಮಂಗಳೂರು—ಮಂಬುಯಿ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ೧೪ ಜನರು ಸಣ್ಣ ಸಣ್ಣ ಗುಡಿಸಲುಗಳನ್ನು ಅಕ್ರಮವಾಗಿ ಹಾಕಿ ಕೊಂಡಿರುತ್ತಾರೆ.

ಆ) ಸದರಿ ಅತಿಕ್ರಮಗಳು ಆಕ್ಷೇಪಕರವಾಗಿದ್ದು ಹಾಲಿ ಚಾರಿಗುಂಟ್ಲಿರುವ ನಿಯಮಾವಳಿಗಳ ರೀತ್ಯಾ ಸಕ್ರಮಗೊಳಿಸಲು ಬರುವುದಿಲ್ಲ. ಆದ್ದರಿಂದ ಅವರಿಗೆ ಹಕ್ಕುಪತ್ರ ನೀಡಲು ಸಾಧ್ಯವಿಲ್ಲ.

ತುರುವೇಕೆರೆ ನಿವಾಸಿಗಳಿಗೆ ಕುಡಿಯುವ ನೀರಿನ ಸರಬರಾಜು

೧೩೫೪. ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ). —ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ತುರುವೇಕೆರೆ ನಿವಾಸಿಗಳಿಗೆ ಕುಡಿಯುವ ನೀರನ್ನು ಒದಗಿಸಲು ಪಟ್ಟಣ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿಯು ಪತಿಯಿಂದ ಅಂದಾಜು ತಯಾರಿಸಲಾಗಿದೆಯೆ, ಹಾಗಿದ್ದಲ್ಲಿ ಅದರ ಮೊಬಲಗೆಷ್ಟು ?

ಆ) ಪುರಸಭೆಯು ನಿವಾಸಿಗಳಿಗೆ ಸಾಕಷ್ಟು ನೀರನ್ನು ಒದಗಿಸದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಇ) ಹಾಗಿದ್ದಲ್ಲಿ ಯೋಜನೆಯನ್ನು ಅತಿ ಜರೂರಾಗಿ ಮಂಜೂರು ಮಾಡಿ ಕೆಲಸ ಕೈಗೊಳ್ಳಲು ಸರ್ಕಾರದವರು ಸೂಕ್ತ ವಿಪ್ಪಾಡು ಮಾಡಲು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ರೂ. ೨೭-೦೦ ಲಕ್ಷಗಳ ಮೊತ್ತದ ಅಂದಾಜನ್ನು ತಯಾರಿಸಿದೆ.

ಆ) ಬಂದಿದೆ.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಅಂದಾಜು ವೆಚ್ಚ ವಿವರಗಳು ಬಂದ ನಂತರ ಹಾಗೂ ಅಂದಾಜು ವೆಚ್ಚದ ಶೇಕಡಾ ಹತ್ತು ಭಾಗವಾದ ೨.೭೦ ಲಕ್ಷ ರೂ ಗಳನ್ನು ಪುರಸಭೆಯು ಠೇವಣಿಯಾಗಿ ಇಟ್ಟನಂತರ ಈ ಯೋಜನೆಗೆ ಮಂಜೂರಾತಿ ನೀಡುವ ವಿಷಯವನ್ನು ಪರಿಶೀಲಿಸಲಾಗುವುದು.